ಶಿರೂರಿನಲ್ಲಿ ಮೀನುಗಾರಿಕಾ ಬಂದರು ಅಭಿವೃದ್ಧಿ.

೨೧೫. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ದಕ್ಷಿಣ ಕನ್ನಡ ಜಿಲ್ಲೆಯ ಶಿರೂರಿನಲ್ಲಿ ಮೀನುಗಾರಿಕೆ ಬಂದರನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಯೋಜನೆ ಮಾಡಿದೆಯೇ?

(ಆ) ಹಾಗಿಲ್ಲದಿದ್ದಲ್ಲಿ ಈ ತನಕ ಮಾಡಿದ ವೆಚ್ಚ ಎಷ್ಟಲವೆಂದು ಸರ್ಕಾರ ಪರಿಗಣಿಸಿಲ್ಲವೆ?

(ಇ) ಬ್ರೇಕ್ ವಾಟರ್ ನಿರ್ಮಾಣ, ಮೀನು ಒಣಗಿಸುವ ಯಾರ್ಡ್ ರಚನೆ, ಮಂಜುಗಡ್ಡೆ ಕಾರ್ಖಾನೆ ಸಮರ್ಪಕವಾಗಿ ನಡೆಸುವ ಯೋಜನೆಯೇನಾದರೂ ಸರ್ಕಾರಕ್ಕಿದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು).—

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.

(ಇ) ಬ್ರೇಕ್ ವಾಟರ್ ನಿರ್ಮಾಣ ಯೋಜನೆ ಇರುವುದಿಲ್ಲ. ಮೀನು ಒಣಗಿಸುವ ಯಾರ್ಡ್‌ನ ಕೆಲಸವು ಇಷ್ಟರಲ್ಲಿಯೇ ಮುಗಿಯಲಿದೆ ಮತ್ತು ಮಂಜುಗಡ್ಡೆ ಕಾರ್ಖಾನೆಯು ಕೆಲಸವು ಸಮರ್ಪಕವಾಗಿ ನಡೆಯುತ್ತಿದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಶ್ರೀ ಜಿ.ಎಸ್. ಆಚಾರ್‌ರವರ ಪರವಾಗಿ).—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಉತ್ತರದಲ್ಲಿ 'ಇಲ್ಲ' ಎಂದು ಮತ್ತು 'ಉದ್ಭವಿಸುವುದಿಲ್ಲ' ಎಂದು ಇದೆ. ಕೇಂದ್ರ ಸರ್ಕಾರದ ಮೀನುಗಾರಿಕೆ ಯೋಜನೆಯಡಿಯಲ್ಲಿ ಕೈಗೊಂಡಿರತಕ್ಕಂಥ ಕೆಲಸ ಬಹಳ ವರ್ಷಗಳಿಂದ ಹಾಗೆ ಇದೆ. ಈ ಯೋಜನೆಗೆ ಬೇಕಾದ ಹಾಗೆ ವ್ಯವಸ್ಥೆ ಮಾಡದೆ ಇರುವುದರಿಂದ ಯಾಂತ್ರಿಕ ದೋಣಿಗಳು ಅಲ್ಲಿಗೆ ಬರುವುದಕ್ಕೆ ಅನಾನುಕೂಲ ಆಗಿದೆ. ಮತ್ತು ಅಲ್ಲಿ ಮೀನು ಒಣಗಿಸುವ ಮಾರ್ಕೆಟ್ ಯಾರ್ಡ್, ಮಂಜುಗಡ್ಡೆ ಕಾರ್ಖಾನೆಯು ಕೆಲಸ ಮಾಡಿಲ್ಲ, ಏತಕ್ಕೆ ಮಾಡಿಲ್ಲ ಎಂದು ಮಾನ್ಯ ಮುಖ್ಯ ಮಂತ್ರಿಗಳು ತನಿಖೆ ಮಾಡಿದರೆ ನಿಜವಾದ ಚಿತ್ರ ಗೊತ್ತಾಗುತ್ತದೆ. ಮತ್ತು ಅಲ್ಲಿ ಎನು ನಡೆದಿದೆ ಎನ್ನುವ ವರದಿಯನ್ನು ತರಿಸಿ. ತಾವು ಈ ಬಗ್ಗೆ ತನಿಖೆ ಮಾಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆ ಏನೆಂದರೆ ದಕ್ಷಿಣ ಕನ್ನಡ ಜಿಲ್ಲೆಯ ಶಿರೂರಿನಲ್ಲಿ ಮೀನುಗಾರಿಕೆ ಬಂದರನ್ನು ಅಭಿವೃದ್ಧಿಪಡಿಸಲು ಸರ್ಕಾರ ಯೋಜನೆ ಏನಾದರೂ ಮಾಡಿದೆಯೇ ಎಂದು. ಅದಕ್ಕೆ ಸರ್ಕಾರ ಉತ್ತರ ಬಂದರು ಅಭಿವೃದ್ಧಿ ಪಡಿಸುವ ಯೋಜನೆ ಇಲ್ಲ, ಎಂದು ಹೇಳಿದೆ. ಮುಂದೆ ಅವರು ಕೇಳಿರುವ ಪ್ರಶ್ನೆಗಳಿಗೆ 'ಉದ್ಭವಿಸುವುದಿಲ್ಲ' ಎಂದು ಹೇಳಿದೆ. ಸುಮಾರು ೫೦ ಸಾವಿರ ರೂಪಾಯಿಗಳ ವೆಚ್ಚದಲ್ಲಿ ಮೀನುಗಾರಿಕೆ ಮಾರ್ಕೆಟ್ ಯಾರ್ಡ್, ಕೇಂದ್ರ ಸರ್ಕಾರದ ಪರಿಷ್ಕೃತ ಯೋಜನೆಯಡಿಯಲ್ಲಿ ಸಾಮಾಜಿಕ ಭವನ ಮತ್ತು ಸಂಪರ್ಕ ರಸ್ತೆಗಳು, ಮೀನು ಮಾರ್ಕೆಟ್ ಯಾರ್ಡ್ ಬಗ್ಗೆ ಕೆಲಸ ಕೈಗೆತ್ತಿಕೊಂಡು ಸುಮಾರು ೧೧೦೩ ಲಕ್ಷ ರೂಪಾಯಿಗಳನ್ನು ವಿಚಾರ್ ಮಾಡಿದ್ದೇವೆ. ಇಲ್ಲಿ ಅಭಿವೃದ್ಧಿಪಡಿಸತಕ್ಕಂಥ ವಿಚಾರದಲ್ಲಿ ಹಣ ಕೊಡಬೇಕೆಂದು ಕೇಂದ್ರ ಸರ್ಕಾರದವರ ಮೇಲೆ ಒತ್ತಡ ತರುತ್ತೇವೆ. ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾವು ಒಪ್ಪುತ್ತೇವೆ. ಮೀನುಗಾರಿಕೆ ಅಭಿವೃದ್ಧಿಪಡಿಸತಕ್ಕಂಥ ಬೇಡಿಕೆಯನ್ನು ಬಂದರನ್ನಾಗಿ ಮಾಡಬೇಕೆನ್ನುವ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಇದರ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು, ಇದನ್ನು ಬಂದರನ್ನಾಗಿ ಅಭಿವೃದ್ಧಿಪಡಿಸುವುದಕ್ಕೆ ಬೇಕಾದ ಹಣ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೆ, ಬ್ರೇಕ್ ವಾಟರ್ ನಿರ್ಮಾಣವಾಗದಿದ್ದರೆ ಯಾಂತ್ರೀಕೃತ ದೋಣಿಗಳು ಬರುವುದಕ್ಕೆ ಆಗುವುದಿಲ್ಲ. ಅಮೇಲೆ, ಮಂಜುಗಡ್ಡೆ ತಯಾರು ಮಾಡುವ ಕಾರ್ಖಾನೆಯಾಗಿದ್ದರೂ ಅದೂ ಕೂಡಾ ಕಾರ್ಯ ನಿರ್ವಹಿಸುತ್ತಿಲ್ಲ ಇದರ ಬಗ್ಗೆ ತಪ್ಪು ಮಾಹಿತಿಗಳನ್ನು ಅಧಿಕಾರಿಗಳು ಮಾನ್ಯ ಮುಖ್ಯ ಮಂತ್ರಿಗಳಿಗೆ ಒದಗಿಸಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಇದರ ಬಗ್ಗೆ ತನಿಖೆ ಮಾಡಿಸಿ ಮಂಜುಗಡ್ಡೆ ಕಾರ್ಖಾನೆ ಯಾವಾಗ

ಪ್ರಾರಂಭವಾಯಿತು? ಎಷ್ಟು ಮಂಜುಗಡ್ಡೆ ಉತ್ಪಾದನೆ ಮಾಡಲಾಗಿದೆ? ಈ ಕಾರ್ಖಾನೆಗೆ ಎಷ್ಟು ವೆಚ್ಚವಾಗಿದೆ ಎಂಬುದರ ಬಗ್ಗೆ ಸಂಪೂರ್ಣ ವರದಿಯನ್ನು ತರಿಸಿದರೆ ನಿಜ ಚಿತ್ರ ಗೊತ್ತಾಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರ ಅಭಿಪ್ರಾಯವನ್ನು ಒಪ್ಪುತ್ತೇನೆ. ಆ ವಿವರಗಳು ನಮ್ಮ ಹತ್ತಿರ ಇಲ್ಲ. ನಾನೆ ಅದನ್ನು ತರಿಸಿ ತಮಗೆ ಒದಗಿಸಿಕೊಡುತ್ತೇನೆ. ಹಾಗೂ ಇದರ ಬಗ್ಗೆ ಅಭಿವೃದ್ಧಿಪಡಿಸುವುದಕ್ಕೆ ಬೇಕಾದ ಹಣವನ್ನು ಪಡೆಯುವುದಕ್ಕೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವುದು ನಮ್ಮ ಇಚ್ಛೆಯಾಗಿದೆಯೆಂದು ಹೇಳುತ್ತೇನೆ.

ಬೆಳಗಾವಿ ಹಾಗೂ ಬಿಜಾಪುರ ಜಿಲ್ಲೆಗಳ ಜನರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ

೭. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಸರ್ಕಾರದವರು ಈ ವರ್ಷ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಯಾವ ಯಾವ ವ್ಯಕ್ತಿಗಳಿಗೆ ನೀಡಿದ್ದಾರೆ,

ಆ) ಆ ವ್ಯಕ್ತಿಗಳ ಪೈಕಿ ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಯಲ್ಲಿ ಎಷ್ಟು ಜನರಿಗೆ ಕೊಡಲಾಗಿದೆ,

ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು),

ಅ) ಪಟ್ಟಿಯನ್ನು ಲಗತ್ತಿಸಲಾಗಿದೆ

ಆ) ಬೆಳಗಾವಿ ಜಿಲ್ಲೆಯಿಂದ ಇಬ್ಬರಿಗೆ ಹಾಗೂ ಬಿಜಾಪುರ ಜಿಲ್ಲೆಯಿಂದ ಇಬ್ಬರಿಗೆ ನೀಡಲಾಗಿದೆ